ತಾಳಿಭಾಗ್ಯ ಯೋಜನೆ ಬದಲು ಬೇರೆ ಯೋಜನೆ ಕಾರ್ಯರೂಪಕ್ಕೆ ತರುವುದು.

೩೦೭೨. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಳಿಭಾಗ್ಯ ಯೋಜನೆ ಬದಲು ಬೇರೆ ಒಂದು ಯೋಜನೆ ಪ್ರಾರಂಭಿಸಲಾಗುವುದು ಎಂದು ಸರ್ಕಾರದವರು ತಿಳಿಸಿದ್ದು, ಅದು ಕಾರ್ಯರೂಪಕ್ಕೆ ಬಂದಿದೆಯೇ ?

ಆ) ಬಂದಿಲ್ಲದಿದ್ದರೆ, ಅದಕ್ಕೆ ಕಾರಣವೇನು ?

ಶ್ರೀ ಪಿ ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು).—

ಅ) ಪ್ರಶ್ನೆಯೇ ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾಜಿ ಮುಖ್ಯ ಮಂತ್ರಿಗಳು ತಾಳಿಭಾಗ್ಯ ಯೋಜನೆಯ ಅನುಕೂಲ ಕೇವಲ ಹಿಂದೂ ಹೆಣ್ಣುಮಕ್ಕಳಿಗೆ ಆಗುತ್ತಿದೆ ತಾಳಿ ಕೊಡುವುದನ್ನು ಕೇವಲ ಹಿಂದೂ ಹೆಣ್ಣುಮಕ್ಕಳು ಮಾತ್ರ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಈ ಯೋಜನೆಯ ಲಾಭವನ್ನು ಮುಸ್ಲಿಂ ಹೆಣ್ಣುಮಕ್ಕಳು ಪಡೆಯುತ್ತಾ ಇಲ್ಲ ಅದಕ್ಕಾಗಿ, ಈ ಯೋಜನೆಯನ್ನು ನಿಲ್ಲಿಸಿ, ಬೇರೆ ಕಾರ್ಯಕ್ರಮವನ್ನು ತಕ್ಷಣ ತರುವುದಾಗಿ ಹೇಳಿದ್ದರು. ಈ ತಾಳಿಭಾಗ್ಯ ಯೋಜನೆಯು ತುಂಬಾ ಅನುಕೂಲವಾದುದು. ನಿಮಗೆ ಖುಷಿ ಬಂದಾಗ ಮಾಡುವುದು, ಅನಂತರ ಬದಲಾವಣೆ ಮಾಡತಕ್ಕಂಥ ಅಗತ್ಯ ಇಲ್ಲ. ತಾವು, ಈ ಸದನದ ಅಭಿಪ್ರಾಯವನ್ನೂ ತೆಗೆದುಕೊಳ್ಳಿ. ಮುಸ್ಲಿಮರಿಗೆ ಮದುವೆ ಸಂದರ್ಭದಲ್ಲಿ ಬೇರೆ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು. ಈ ತಾಳಿ ಭಾಗ್ಯ ಯೋಜನೆಯು ಜನಪ್ರಿಯವಾದದು, ಈಗ ಈ ಯೋಜನೆ ಇಲ್ಲದೆ ಇರುವುದರಿಂದ ಸಾಮೂಹಿಕ ಮದುವೆಗಳು ನಡೆಯುತ್ತಿಲ್ಲ, ಆದುದರಿಂದ ಈ ಕಾರ್ಯಕ್ರಮವನ್ನು ಮತ್ತೊಮ್ಮೆ ಜಾರಿಗೆ ತರತಕ್ಕಂಥ ಪ್ರಯತ್ನ ಮಾಡಬೇಕು, ಇದನ್ನು ಮುಂದಂವರಿಸಿಕೊಂಡು ಹೋಗಬೆಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಜನತಾ ಸರ್ಕಾರ, ಜನ ಮರುಳು ಮಾಡುವಂಥ ಅನೇಕ ಒಣ ಕಾರ್ಯಕ್ರಮಗಳನ್ನು ನಿಲ್ಲಿಸುವಂಥ ಪರಿಸ್ಥಿತಿ ಬಂದಿರುವುದು ತಮ್ಮ ಗಮನಕ್ಕೂ ಬಂದಿರಬಹುದು.

ಶ್ರೀ ಪಿ ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಒಣ ಪ್ರಚಾರಕ್ಕೆ ಹಾಗೂ ಪ್ರಶಿಷ್ಟ್ಗೋಸ್ಕರ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಆ ರೀತಿ ಇದ್ದರೆ, ಈ ತಾಳಿಭಾಗ್ಯ ಯೋಜನೆಯನ್ನು ಪುರು ಪರಿಶೀಲನೆ ಮಾಡತಕ್ಕ ಮಾತನ್ನು ನಮ್ಮ ಹಿಂದಿನ ಮುಖ್ಯ ಮಂತ್ರಿಗಳು ಹೇಳುತ್ತಾ ಇರಲಿಲ್ಲ. ಇದೇ ಸದನದಲ್ಲಿ ಈ ವಿಚಾರದಲ್ಲಿ ಎರಡು ಅಭಿಪ್ರಾಯಗಳನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಸರ್ಕಾರ ಕೆಲವೊಂದು ಯೋಜನೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಎಂಬ ಟೀಕೆಯನ್ನು ನಾನು ಒಪ್ಪುವುದಿಲ್ಲ. ೧೯೮೫ರಲ್ಲಿ ಈ ಕಾರ್ಯಕ್ರಮ ಪ್ರಾರಂಭವಾಯಿತು. ೧೯೮೭ನೇ ಇಸವಿಯವರೆಗೆ. ಅಂದರೆ ಈ ಎರಡು ವರ್ಷದಲ್ಲಿ ೭,೫೬೪ ದಂಪತಿಗಳಿಗೆ ಈ ಯೋಜನೆಯಿಂದ ಉಪಯೋಗವಾಗಿದೆ. ೨೮,೬೫೫ ರೂಪಾಯಿಗಳು ಖರ್ಚಾಗಿದೆ, ಹಾಗೆಯೇ ೧೯೮೭-೮೮ರಲ್ಲಿ ೩೭೧೧ ದಂಪತಿಗಳಿಗೆ ಉಪಯೋಗವಾಗಿದ್ದು, ೧೭ ಲಕ್ಷ ೫೦ ಸಾವಿರದ ೯೮೦ ರೂಪಯಿಗಳು ಖರ್ಚಾಗಿದೆ. ನಾನು ಈ ವಿವರಗಳನ್ನು ಏಕೆ ಕೊಡುತ್ತಿದ್ದೇನೆ ಎಂದರೆ, ಈ ವಿಚಾರದಲ್ಲಿ ಎರಡು ರೀತಿಯ ಅಭಿಪ್ರಾಯ ಇತ್ತು. ನಮ್ಮವರಿಗೇ ಕೆಲವರಿಗೆ ಈ ಯೋಜನೆಯು ಲಾಭ ಸಿಕ್ಕುತ್ತಾ ಇಲ್ಲ ಎಂಬ ಭಾವನೆಯೂ ಇರಬಹುದು. ನಮ್ಮ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಹೆಗಡೆಯವರು ಪುರು ಪರಿಶೀಲನೆ ಮಾಡುವುದಾಗಿ ಈ ಸದನಕ್ಕೆ ಭರವಸೆ ಕೊಟ್ಟಿದ್ದಾರೆ. ತಾಳಿಭಾಗ್ಯ ಯೋಜನೆಯನ್ನು ನಿಲ್ಲಿಸಿ, ಬೇರೆ ರೀತಿಯಲ್ಲಿ, ಎಲ್ಲಾ ವರ್ಗದ ಜನರಿಗೆ, ಎಲ್ಲಾ ಧರ್ಮದವರಿಗೆ, ಎಲ್ಲಾ ಜಾತಿಗಳವರಿಗೆ ಉಪಯೋಗವಾಗುವ ರೀತಿಯಲ್ಲಿ ಕಾರ್ಯಕ್ರಮವನ್ನು ಜಾರಿಗೆ ತರುವುದಾಗಿ ಹೇಳಿದಾ ರೆ. ನಾನು ಇಪತ್ತಿನ ದಿವಸ ಈ ವಿಷಯದಲ್ಲಿ ಘೋಷಣೆ ಮಾಡುವುದಕ್ಕೆ ಹೋಗುವುದಿಲ್ಲ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರು ಕೇಂದ್ರದ ಅನೇಕ ಅಧಿಕಾರಿಗಳ ಜೊತೆ ಮಾತ

ನಾಡಿ ಒಂದು ಒಳ್ಳೆಯ ಯೋಜನೆಯನ್ನು ತಯಾರು ಮಾಡುತ್ತಿದ್ದಾರೆ. ಈ ಯೋಜನೆಯಿಂದ ಬಹಳಷ್ಟು ಎಲ್ಲಾ ಜಾತಿಯ ಹೆಣ್ಣುಮಕ್ಕಳಿಗೆ ಉಪಯೋಗವಾಗಬಹುದು...

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಒಳ್ಳೆಯ ಯೋಜನೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ, ಎಲ್ಲರೂ ಏಕೆ ನಿಂತುಕೊಳ್ಳುತ್ತಿದ್ದೀರಿ...

ಶ್ರೀ ಪಿ. ಜಿ. ಆರ್. ಸಿಂಧ್ಯ —ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಡಬೇಕು. ಆದರೆ ವಿರೋಧಪಕ್ಷದ ಸದಸ್ಯರು ಏನೂ ಹೇಳಿದರೂ ನಾವು ಕೇಳಿಕೊಂಡು ಹೋಗಬೇಕೇ ? ಅವರ ಹಾಗೆಯೇ ನಾವೂ ಕೂಡ ರಾಜಕೀಯವಾಗಿ ಜನರ ಬೆಂಬಲ ಪಡೆದು ಬಂದಿದ್ದೇವೆ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾಳಿಭಾಗ್ಯ ಯೋಜನೆಯೂ ಮುಗಿದಿದೆ, ಆಗಿನ ಮುಖ್ಯ ಮಂತ್ರಿಗಳು ಹೋದರು, ಈಗ ಆ ಪ್ರಶ್ನೆ ಏಕೆ ?...

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಪ್ರಶ್ನೋತ್ತರ ಸಂದರ್ಭದಲ್ಲಿ ಯೀಲ್ಡ್ ಆಗಿಲ್ಲ, ನೀವು ಎದ್ದುನಿಂತುಕೊಂಡು ಹೇಳಿದರೆ ಹೇಗೆ ?...

ಶ್ರೀ ಬಿ. ಜಿ. ಜವಳಿಂಡಿ.—ಮಾನ್ಯಮಂತ್ರಿಗಳು ಸಮರ್ಪಕವಾದ ಉತ್ತರ ಕೊಡುತ್ತಿದ್ದಾರೆ. ಇವರು ಏಕೆ ತೊಂದರೆ ಕೊಡಬೇಕು ?

ಅಧ್ಯಕ್ಷರು.—ಒಳ್ಳೆಯ ಉತ್ತರ ಹೇಳಬೇಕಾದರೆ, ನೀವು ತೊಂದರೆ ಮಾಡುತ್ತಿದ್ದೀರಿ. ಅವರು ಏನು ಹೇಳಿದರೂ ಕೇಳಿಸಬಾರದು ಎನ್ನುವ ರೀತಿಯಲ್ಲಿ ಮಾನಾನಾಡುತ್ತಿದ್ದೀರಿ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಯೋಜನೆಯ ವಿವರಗಳನ್ನು.....

(ಗೊಂದಲ)

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ, ನಮಗೆ ನೀವು ಒಂದು ಪಾಠ ಇಟ್ಟು ಬಿಡಿರಿ.

ಶ್ರೀ ಪಟವಂಕಿ ರತ್ನಾಕರ್.—ಮಾನ್ಯ ಮಂತ್ರಿಗಳು ಸರಿಯಾದ ರೀತಿ ಉತ್ತರ ಹೇಳಬೇಕು.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಯಡಿಯೂರಪ್ಪನವರೇ, ತಾವು ಕೇಳಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ —ಅಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಇದು ತುಂಬಾ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡು ನಿಮಗೆ ಈ ರೀತಿ ಪೀಟಿ ಬಂದಾಗ ನಿಲ್ಲಿಸುವುದು ಸರಿಯಲ್ಲ. ತಾವೇ ವಿವರ ಕೊಟ್ಟಿದ್ದೀರಿ. ಇದರಿಂದ ಎಷ್ಟೊಂದು ಜನಕ್ಕೆ ಲಾಭವಾಗಿದೆ ಎಂದು ಹೇಳಿದ್ದೀರಿ. ನಿಜವಾಗಿಯೂ ಇದರಿಂದ ಮುಸ್ಲಿಂ ಹೆಣ್ಣು ಮಕ್ಕಳಿಗೆ ಸವಲತ್ತು ಸಿಗದೇ ಇದ್ದಲ್ಲಿ ಅವರಿಗೆ ಇದಕ್ಕೆ ಸಮಾನವಾದಂಥ ಮೊತ್ತವನ್ನು ಕೊಡಿ ಅಥವಾ ಇನ್ನೂ ಜಾಸ್ತಿ ಕೊಡಿ, ಆದಕ್ಕೆ ನನ್ನ ವಿರೋಧ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಕಾರ್ಯಕ್ರಮ ಮಾಡುತ್ತಾ, ಲಕ್ಷವಂತರ ಬಡ ಹೆಣ್ಣು ಮಕ್ಕಳು ಬಂಗಾರನೇ ನೋಡಿರುವುದಿಲ್ಲ, ಅವರು ಒಂದೆರಡು ಗ್ರಾಂ ಬಂಗಾರದ ತಾಳಿಯನ್ನಾದರೂ ಕಟ್ಟಿಕೊಳ್ಳಲಿ ಎಂದು ಹೇಳಿ ಪ್ರಚಾರ ತೆಗೆದುಕೊಂಡಿದ್ದಾರೆ. ಈಗ ಈ ಕಾರ್ಯಕ್ರಮವು ನಿಲ್ಲಿಸಬೇಡಿ ಮುಸ್ಲಿಂ ಹೆಣ್ಣುಮಕ್ಕಳಿಗೆ ಏನು ಬೇಕೋ ಅದನ್ನು ಮಾಡಿಕೊಡಿ. ಇನ್ನು ಕೆಲವು ಕಾರ್ಯಕ್ರಮಗಳು ನಿಲ್ಲುಸ್ತಿರುವುದು ತಮ್ಮ ಗಮನಕ್ಕೆ ಬಂದಿದಯೇ ಎಂದು ಕೇಳಿದ್ದೇನೆ. ಈಗ ಉಚಿತವಾಗಿ ಯೂನಿಫಾರಂ ಕೊಡುವ ಕಾರ್ಯಕ್ರಮ ಇದೆ. ಇದು ಪ್ರಾರಂಭವಾದಾಗ ಎರಡು ಜೊತೆ ಯೂನಿಫಾರಂ ಕೊಡುತ್ತಿದ್ದರು. ಈ ವರ್ಷ ಇನ್ನೂ ಒಂದು ಜೊತೆ ಕೂಡಾ ಸಿಕ್ಕಿಲ್ಲ. ಪ್ರೌಢಶಾಲೆಗಳು ಪ್ರಾರಂಭವಾಗಿ ಆಗಲೇ ಐದು ತಿಂಗಳಾಯಿತು. ಇನ್ನೂ ಸರಿಯಾಗಿ ಯೂನಿಫಾರಂ ಸಿಕ್ಕಿಲ್ಲ, ಆದುದರಿಂದ ತಾಳಿಭಾಗ್ಯದಂಥ ಒಳ್ಳೆಯ ಕಾರ್ಯಕ್ರಮ ರದ್ದು ಮಾಡದೇ ಈ ಯೋಜನೆಯನ್ನು ಮೊತ್ತೆ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮುಸ್ಲಿಂ ಹೆಣ್ಣುಮಕ್ಕಳಿಗೆ ಬೇರೆ ಏನು ಬೇಕಾದರೂ ಕೊಡಿ ನಾನು ಬೇಡ ಎನ್ನುವುದಿಲ್ಲ, ಆದರೆ ತಾಳಿಭಾಗ್ಯ ನಿಲ್ಲಿಸಂವುದರಿಂದ ಹಿಂದೂ

ಸಮಾಜದ ಹೆಣ್ಣುಮಕ್ಕಳಿಗೆ ಅಪಮಾನ ಮಾಡಿದಹಾಗೆ ಆಗುತ್ತದೆ, ಇದು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಮ್ಮ ಸರಕಾರ ಬಡವರಿಗೆ ಜನ ಸಾಮಾನ್ಯರಿಗೆ ಉಪಯೋಗವಾಗತಕ್ಕಂಥ ಯಾವುದೇ ಕಾರ್ಯಕ್ರಮಗಳನ್ನೂ ನಿಲ್ಲಿಸಿಲ್ಲ ಎಂಬ ಒಂದು ಸ್ಪಷ್ಟವಾದ ವಿವರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಇನ್ನು ತಾಳಿಭಾಗ್ಯ ಯೋಜನೆ ಬಗ್ಗೆ ಪರ್ಯಾಯವಾದ ಒಂದು ಕಾರ್ಯಕ್ರಮವನ್ನು ಮಾಡುತ್ತೇವೆಂದು ಹಿಂದಿನ ಮುಖ್ಯ ಮಂತ್ರಿಗಳು ಈ ಸದನಕ್ಕೆ ಏನು ಒಂದು ಮಾತನ್ನು ಕೊಟ್ಟಿದ್ದಾರೆ ಅದರ ಪ್ರಕಾರವಾಗಿ ನಾವು ಒಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಹಣ ಪಡೆಯುತಕ್ಕಂಥ ವಿಚಾರ ಇದೆ. ಇದು ಇನ್ನೂ ವಿವಿಧ ಹಂತಗಳಲ್ಲಿ ಇದೆ. ಅದರ ಜೊತೆಗೆ ನಾವು ಈಗ ವುಮೆನ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಮಾಡಿರುತ್ತೇವೆ. ಈ ಕಾರ್ಪೊರೇಷನ್‌ಗೆ ವಿಶೇಷವಾದಂಥ ಒಂದು ಕೆಲಸ ಕೊಟ್ಟು, ಇದರ ಬಗ್ಗೆ ಯೋಜನೆ ತಯಾರು ಮಾಡುವುದಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರು ದೆಹಲಿಗೆ ಹೋಗಿ ಈಗಾಗಲೇ ಅದರ ಬಗ್ಗೆ ವಿವರಗಳನ್ನು ತೆಗೆದುಕೊಂಡು ಬಂದಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳ ಜೊತೆ ಸಮಾಲೋಚನೆ ಮಾಡಿ ಎಲ್ಲಾ ಜಾತಿಯ ಜನಗಳಿಗೆ, ಎಲ್ಲಾ ಧರ್ಮದ ಜನಗಳಿಗೆ ಉಪಯೋಗ ಆಗತಕ್ಕಂಥ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಇದನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರಕಾರ ಪ್ರಾರಂಭ ಮಾಡುವಂತಹ ಎಲ್ಲಾ ಕಾರ್ಯಕ್ರಮಗಳೂ, ಎಲ್ಲಾ ಜನಾಂಗದವರಿಗೆ ಉಪಯೋಗ ಆಗುವಂತೆ ಮಾಡುವುದಕ್ಕೆ ಸಾಧ್ಯವೇ ? ಒಂದೊಂದು ಕಾರ್ಯಕ್ರಮ ಒಂದೊಂದು ಜನಾಂಗಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ತೃಪ್ತಿಕರವಾದ ಉತ್ತರ ಕೊಟ್ಟರೂ ನಿಮಗೆ ಸಮಾಧಾನವಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಕಾರ್ಯಕ್ರಮದ ಮೂಲೋದ್ದೇಶ ಒಂದೆರಡು ಗ್ರಾಂ ಬಂಗಾರದ ಒಡವೆ ಬಡ ಹೆಣ್ಣು ಮಕ್ಕಳ ಮೈಮೇಲೆ ಇರಬೇಕು ಎಂಬ ದೃಷ್ಟಿಯಿಂದ ಮಾಡಿದ್ದು. ಬಡವರಿಗೆ ಅನೇಕ ಕಾರ್ಯಕ್ರಮಗಳನ್ನು ಈ ಸರಕಾರವೂ ಮಾಡುತ್ತಿದೆ. ಕೇಂದ್ರ ಸರಕಾರವೂ ಮಾಡುತ್ತಿದೆ. ಅದಂ ಬೇರೆ. ಆದರಿಂದ ಈ ಯೋಜನೆಯು ಮೂಲೋದ್ದೇಶ ಸಫಲವಾಗುವುದಿಲ್ಲ. ತಾಳಿಭಾಗ್ಯವನ್ನು ಮತ್ತೆ ಪ್ರಾರಂಭ ಮಾಡಬೇಕು. ಬಡವರಿಗೆ ತಾಳಿ ಕೊಡಬೇಕು. ಆದನ್ನು ಬಿಟ್ಟು ಬೇರೆ ಬಡವರಿಗೆ ಕಾರ್ಯಕ್ರಮ ಪ್ರಾರಂಭ ಮಾಡಿದರೂ ಈ ಯೋಜನೆಯ ಮೂಲ ಉದ್ದೇಶ ಸಫಲವಾಗುವುದಿಲ್ಲ. ಮುಸ್ಲಿಂ ಹೆಣ್ಣು ಮಕ್ಕಳಿಗೆ ಇದರ ಅನುಕೂಲ ಸಿಗುವುದಿಲ್ಲ ಎಂದು ಇದನ್ನು ನಿಲ್ಲಿಸಿದರೆ ಹಿಂದೂ ಸಮಾಜದ ಬಡ ಹೆಣ್ಣುಮಕ್ಕಳಿಗೆ ಅಪಮಾನ ಮಾಡಿದರೆ, ಈ ಸರಕಾರಕ್ಕೆ ಶಾಶ್ವತವಾಗಿ ಕೆಟ್ಟ ಹೆಸರು ಬರುತ್ತದೆ. ಇದು ನಿಮ್ಮ ಸರಕಾರದ ಮೇಲೆ ಬೀಳುತ್ತದೆ ಇದನ್ನು ತಾವು ಹೊತ್ತುಕೊಳ್ಳಬೇಕಾಗುತ್ತದೆ, ಈ ಒಂದು ಎಚ್ಚರಿಕೆ ಸಹ ಸರಕಾರಕ್ಕೆ ಇರಲಿ ಎಂದು ಹೇಳುತ್ತೇನೆ, ಇದರ ಮೇಲೆ ತಮಗೆ ಬಿಟ್ಟಿದ್ದು ತಮ್ಮ ಸರಕಾರಕ್ಕೆ ಬಿಟ್ಟದ್ದು.

ಶ್ರೀ ಪಿ. ಜಿ. ಆರ್. ಸಿಂಧ್ಯ —ಮುಸ್ಲಿಂ ಹೆಣ್ಣು ಮಕ್ಕಳಿಗೆ ಉಪಯೋಗ ಆಗುವುದಿಲ್ಲ ಎಂಬ ದೃಷ್ಟಿಯಿಂದ ಈ ಯೋಜನೆಯನ್ನು ನಿಲ್ಲಿಸಿಲ್ಲ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಸ್ಪಷ್ಟವಾಗಿ ಹಾಗೆ ಹೇಳಿದ್ದಾರೆ, ರೆಕಾರ್ಡ್‌ನಲ್ಲಿ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ —ರೆಕಾರ್ಡ ತೆಗೆಸೋಣ. ಆ ದೃಷ್ಟಿಯಿಂದ ಇದನ್ನು ನಿಲ್ಲಿಸಿಲ್ಲ. ಇನ್ನೂ ಹೆಚ್ಚಿನ ರೀತಿಯಿಂದ ಉಪಯೋಗವಾಗುವ ಕಾರ್ಯಕ್ರಮದ ಬಗ್ಗೆ ಯೋಜನೆ ಮಾಡುತ್ತಿದ್ದೇವೆ.

ಶ್ರೀ ರಾಜವರ್ಧನ್. —ತಾಳಿಭಾಗ್ಯ ಯೋಜನೆ ಜಾರಿಯಲ್ಲಿರುವಾಗ ಇದರ ಬಗ್ಗೆ ವ್ಯಂಗ್ಯವಾಗಿ ಈ ಸದನದಲ್ಲೇ ಅನೇಕ ಸಲ ಮಾತನಾಡಿರುತ್ತಾರೆ. ಈಗ ಮತ್ತೆ ತಾಳಿಭಾಗ್ಯ ಜಾರಿಗೆ ತನ್ನಿ ಎಂದು ಹೇಳಂತ್ತಿದ್ದಾರೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ರಾಜವರ್ಧನ್‌ರವರಿಗೆ ತಾಳಿಯ ಅಗತ್ಯ ಇಲ್ಲ ಎಂದೂ ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾಳಿಭಾಗ್ಯ ಯೋಜನೆಗೆ ಪರ್ಯಾಯವಾಗಿ ಇನ್ನೊಂದು ಯೋಜನೆ ಹಾಕುತ್ತೇವೆಂದು ಹಿಂದಿನ ಮುಖ್ಯ ಮಂತ್ರಿಗಳು ಹೇಳಿದರು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಿಂದೆ ಮಾನ್ಯ ಬಸವಣ್ಣಪ್ಪನವರು ಮಂತ್ರಿಗಳಾಗಿದ್ದರು. ಅವರ ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿ ಕೊಡಬೇಕೆಂಬ ಯೋಜನೆ, ರಘುಪತಿಯವರ ಫ್ರೀ ಟಿಕ್ಕೆಟ್ಟುಬುಕ್, ಯೂನಿಫಾರಂ ಕೊಡತಕ್ಕಂಥಾದ್ದು, ಇದೆಲ್ಲಾ ಕೂಡಾ ಹಿಂದಿನ ಮುಖ್ಯ ಮಂತ್ರಿಗಳೇ ಹೇಳಿದಂಥ ಯೋಜನೆಗಳು ಈಗ ಹೊಸದಾಗಿ ಬಂದಂಥ ಸರಕಾರ ಈ ಯೋಜನೆಗಳನ್ನು ಇಟ್ಟುಕೊಳ್ಳುತ್ತದೆಯೋ ಅಥವಾ ಅವರು ಹೋಗಿದ್ದಾರೆ ಎಂದು ಹೇಳಿ ಈ ಯೋಜನೆಗಳನ್ನು ಕೈಬಿಡುತ್ತದೋ ಎಂಬುದನ್ನು ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸರಕಾರ ಎನ್ನುವುದು ನಿರಂತರವಾಗಿ ಇರತಕ್ಕಂಥಾದ್ದು. ಮತ್ತು ನಮ್ಮ ಪಕ್ಷದವರೇ ಆಗಿರತಕ್ಕಂಥವರೂ, ನನಗಿಂತ ಹಿರಿಯರೂ, ಅನುಭವ ಇರತಕ್ಕಂಥವರೂ ಆಗಿರುವ ಬಸವಣ್ಣಪ್ಪನವರು ಈ ಇಲಾಖೆಯನ್ನು ಚೆನ್ನಾಗಿ ನಡೆಸಿದ್ದಾರೆ. ಅವರು ಕೊಟ್ಟಿರತಕ್ಕಂಥ ಎಲ್ಲಾ ಆಶ್ವಾಸನೆಗಳನ್ನೂ ನಾನು ಕಾರ್ಯಗತ ಮಾಡುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ನಮ್ಮ ಸಮಾಜದಲ್ಲಿ ನಾನಾ ವರ್ಗದ ಹಾಗೂ ನಾನಾ ಜಾತಿಯ ಜನಾಂಗದವರು ಬೇರೆ ಬೇರೆ ರೀತಿಯಲ್ಲಿ ತಾಳಿಯನ್ನು ಮಾಡಿಸುತ್ತಾರೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ತಾಳಿ ಬಗ್ಗೆ ಏತಕ್ಕೆ ಇಷ್ಟೊಂದು ಚರ್ಚೆ ? ಹೊಂಗಲಿ ತಾಳಿ ಕಾರ್ಪೊರೇಷನ್ ಆದರೂ ಒಂದು ಮಾಡಿ.

ಶ್ರೀ ವೇದಾಂತ ಹೆಮ್ಮಿಗೆ.—ಈ ಸಮಾಜದಲ್ಲಿ ನಾನಾ ವರ್ಗದ ಜನರಿದ್ದಾರೆ. ಅವರು ತಮ್ಮದೇ ಆದ ರೀತಿಯಲ್ಲಿ ತಾಳಿಯನ್ನು ಮಾಡಿಸುತ್ತಾರೆ. ಆಯಾಯಾ ವರ್ಗದ ಜನರಿಗೆ ಸಂಬಂಧಪಟ್ಟಂತೆ ತಾಳಿ ಮಾಡಿಸಿಕೊಡುತ್ತೀರೋ ಅಥವಾ ಎಲ್ಲರಿಗೂ ಕಾಮನ್ ಆಗಿ ತಾಳಿ ಮಾಡಿಸಿಕೊಡುತ್ತೀರೋ ಎಂಬುದನ್ನು ಮಾನ್ಯ ಮಂತ್ರಿಗಳು ದಯಮಾಡಿ ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಪ್ರಶ್ನೆ ಉದ್ಭವವಾಗುವುದಿಲ್ಲ. ನಾವು ಈ ಕಾರ್ಯಕ್ರಮವನ್ನು ಈಗಾಗಲೇ ಕೈಬಿಟ್ಟಿದ್ದೇವೆ. ಆದರೆ ಮಾನ್ಯ ಯಡಿಯೂರಪ್ಪನವರು ಎತ್ತಿದಂತಹ ಪ್ರಶ್ನೆಗೆ ವಿವರಣೆಯನ್ನು ಕೊಡಬೇಮಸುಪುದೇನೆಂದರೆ ತಾಳಿ ಭಾಗ್ಯ ಯೋಜನೆಯಲ್ಲಿ ತಾಳಿಯನ್ನು ಹಿಂದೂಗಳಿಗೆ ಮಾತ್ರ ಕೊಡುತ್ತೀರಿ ಮುಸ್ಲಿಂ ಜನಾಂಗದವರಿಗೆ ಕೊಡುವುದಿಲ್ಲವೆಂದು ಹೇಳಿದರು ಅದು ತಪ್ಪು ಮುಸ್ಲಿಂ ಹೆಣ್ಣು ಮಕ್ಕಳಿಗೆ ೨೦೦ ರೂಪಾಯಿಗಳ ಪೆತ್ತದ ಎನ್. ಎಸ್. ಪಿ. ಸರ್ಟಿಫಿಕೇಟ್ ಅನ್ನು ಕೊಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸಂತೋಷ.

ಶ್ರೀ ಟಿ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಕೈ ಬಿಟ್ಟಿರುವುದರಿಂದ ನಾನು ಮಾತನಾಡುವಂತಹ ಅಗತ್ಯವಿಲ್ಲ. ಯಾವುದೇ ಮದುವೆಗೆ ಸಂಬಂಧಪಟ್ಟಂತೆ ನೇರವಾಗಿ ನಿಡತಕ್ಕಂಥ ಪರ್ಯಾಯ ಯೋಜನೆಯನ್ನು ಮಾಡಬಹುದು. ಈ ತಾಳಿಭಾಗ್ಯ ಯೋಜನೆ ಇದ್ದಂತಹ ಸಂದರ್ಭದಲ್ಲಿ ಒಂದೆರಡು ಸಾರಿ ನಾನೂ ಸಹ ಹೋಗಿದ್ದೇವೆ. ಅಧಿಕಾರಿಗಳು ಏನು ಮಾಡುತ್ತಾರೆಂದರೆ ಟಾರ್ಗೆಟ್ ರೀಚ್ ಮಾಡಬೇಕೆಂದು ಅಪ್ಲಾಪ್ತ ವಯಸ್ಸಿನ ಹೆಣ್ಣು ಮಕ್ಕಳನ್ನು ಮತ್ತು ಗಂಡು ಮಕ್ಕಳನ್ನು ಸೇರಿಸಿ ಮದುವೆ ಮಾಡಿಸಿರತಕ್ಕಂಥಾದ್ದು ಇದೆ. ಹಲವಾರು ಸಂದರ್ಭಗಳಲ್ಲಿ ಇಂತಹ ಸಮಾರಂಭದಲ್ಲಿ ನಾವು ಪಾಲ್ಗೊಳ್ಳುವುದು ಹೇಗಪ್ಪ ಎಂದು ಯೋಚನೆ ಸಹ ಮಾಡಿದ್ದೇನೆ. ಅವರಿಗೆ ಟಾರ್ಗೆಟ್ ರೀಚ್ ಆಗಬೇಕು ಆದ್ದರಿಂದ ಎಲ್ಲಿಂದಲ್ಲೂ ಹಿಡಿದುಕೊಂಡು ಬಂದು ಮದುವೆ ಮಾಡಿಸುತ್ತಾರೆ. ಆದ್ದರಿಂದ ನೇರವಾಗಿ ನಿಡತಕ್ಕಂಥ ಒಂದು ಪರ್ಯಾಯ ಯೋಜನೆ ಮಾಡಿ. ಇಲ್ಲದಿದ್ದರೆ ಈ ಉದ್ದೇಶಕ್ಕೆ ವ್ಯತಿರಿಕ್ತವಾದ ಕೆಲಸಗಳು ನಡೆಯುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಯಿತು.